

## ಕಲ್ಲಿನ ಸುಂಕದ ಭರಣಿ!

ಮಹಾರಾಷ್ಟ್ರದ ಪಶ್ಚಿಮಘಟ್ಟಗಳ ವಿಹಂಗಮ ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ಶಿವಾಜಿ ಮಹಾರಾಜರು ನಿರ್ಮಿಸಿದರು ಎನ್ನಲಾಗುವ ಸುಮಾರು 300 ಕೋಟೆ ಕೊತ್ತಳಗಳನ್ನು ಕಾಣಬಹುದು. ಅವುಗಳ ನಡುವೆ ದಕ್ಷಿಣ ಪ್ರಸ್ಥಭೂಮಿಯ ಜುನ್ನರ್ ತಾಲ್ಲೂಕಿನ 'ನಾನೇ ಘಾಟ್', ಪುರಾತನ ವ್ಯಾಪಾರದ ಪ್ರಮುಖ ಕಣಿವೆ ಮಾರ್ಗವೆಂದು ಚಾರಿತ್ರಿಕ ಪ್ರಸಿದ್ಧಿ ಪಡೆದಿದೆ. ಮಳೆಗಾಲದಲ್ಲಿ ಹಸಿರು ತುಂಬಿ ಜಲಪಾತಗಳೊಂದಿಗೆ ಕಂಗೊಳಿಸುವ ಈ ಜಾಗವು ಪ್ರವಾಸಿ ತಾಣವೂ ಆಗಿದ್ದು, ಇಲ್ಲಿ ಟ್ರೆಕ್ಕಿಂಗ್ ಸಹ ನಡೆಯುತ್ತದೆ.

ನಾನೇ ಘಾಟ್ ಎಂಬುದು ಮರಾಠಿ ಭಾಷೆಯ ಪದ. ಅದಕ್ಕೆ ಕನ್ನಡದಲ್ಲಿ ಸುಂಕದ ಕಟ್ಟೆ ಎಂಬರ್ಥವಿದೆ. ಸುಂಕ ಸಂಗ್ರಹಕ್ಕೆ ಆಳೆತ್ತರದ ಬೃಹತ್ ಕಲ್ಲಿನ ಭರಣಿಯೊಂದನ್ನು ಕಡೆಯಲಾಗಿದೆ. ಅದುವೇ ಈ ಸುಂಕದ ಕಟ್ಟೆ. ಹಿಂದಿನ ಕಾಲದಲ್ಲಿ ಈ ಬೆಟ್ಟ ದಾಟಿ ಬರುತ್ತಿದ್ದ ವ್ಯಾಪಾರಿಗಳಿಂದ ಸುಂಕ ಸಂಗ್ರಹಕ್ಕೆ ಇದನ್ನು ಬಳಸಲಾಗುತ್ತಿತ್ತು. ಟ್ರೆಕ್ಕಿಂಗ್‌ಗೆಂದು ಬರುವ ಪ್ರವಾಸಿಗರು 'ಜಕಾತಿ ರಾಂಜಣ್' ಹೆಸರಿನ ಶಿಲಾ ನಿರ್ಮಿತಿಯ ಸುಂಕದ ಕಟ್ಟೆಯ ಸಮೀಪವೇ ಹಾದು ಹೋಗಬೇಕಾಗುತ್ತದೆ. ಮಂದಿರಗಳ ಕಾಣಿಕೆ ಡಬ್ಬಿಗಳಿಗೂ, ಹುಂಡಿಗಳಿಗೂ ಇಂದು ಬೀಗದ ಅವಶ್ಯಕತೆಯಿದೆ. ಆದರೆ ಹಿಂದಿನ ಕಾಲದಲ್ಲಿ ಈ ಸುಂಕದ ಡಬ್ಬವೂ ತೆರೆದ ಭರಣಿಯಾಗಿದ್ದದ್ದು, ಅಂದಿನ ಪ್ರಾಮಾಣಿಕತೆ ಹಾಗೂ ವಿಶ್ವಾಸಾರ್ಹತೆಯ ಕುರುಹಾಗಿತ್ತು.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ



## ಚಿಟ್ಟೆಯಾಗುವ ತಯಾರಿ

ಮೊಟ್ಟೆ, ಲಾರ್ವಾ, ಪೊರೆ ಹಾಗೂ ವಯಸ್ಕ – ಹೀಗೆ ನಾಲ್ಕು ಹಂತಗಳಲ್ಲಿ ಚಿಟ್ಟೆ ರೂಪಗೊಳ್ಳುತ್ತದೆ. ಸಾಮಾನ್ಯವಾಗಿ ಲಾರ್ವಾ ಹಂತದಲ್ಲಿ ಕಪ್ಪುಬಣ್ಣದ ಕಂಬಳಿಹುಳವನ್ನು ನಾವೆಲ್ಲ ನೋಡಿರುತ್ತೇವೆ. ಆದರೆ ನಮ್ಮ ಮನೆಗೆ ಬಂದ ಕಂಬಳಿಹುಳವೊಂದು ಗಾಢ ಹಳದಿ ಹಾಗೂ ನಿಂಬೆ ಹಳದಿಯ ಕೂದಲನ್ನು ಹೊಂದಿದ್ದು, ಅಚ್ಚರಿ ಮೂಡಿಸುವಂತಿತ್ತು. ಕಂಬಳಿ ಹುಳ ಮೈಮೇಲೆ ಹರಿದಾಡಿದರೆ ಅಸಾಧ್ಯ ತುರಿಕೆ ತಪ್ಪಿದ್ದಲ್ಲ. ಈ ಹಳದಿ ಬಣ್ಣದ ಮನಮೋಹಕ ಕಂಬಳಿಹುಳುವನ್ನು ಎತ್ತಿಕೊಳ್ಳುವ ಮನಸ್ಸಾದರೂ, ತುರಿಕೆಯ ಭಯದಿಂದ ಜಾಗರೂಕವಾಗಿ ಸುರಕ್ಷಿತ ಪ್ರದೇಶಕ್ಕೆ ಬಿಟ್ಟೆವು. ಪಾತರಗಿತ್ತಿಯ ಅಂದವನ್ನು ನೋಡಿ ಕವಿತೆ ಬರೆದಿದ್ದ ಬೇಂದ್ರೆ ಅಜ್ಜ, ಈ ಕಂಬಳಿಹುಳವನ್ನು ನೋಡಿದ್ದರೆ ಇದರ ಮೇಲೂ ಇನ್ನೂ ಚೆಂದದ ಕವಿತೆ ಬರೆಯುತ್ತಿದ್ದರು ಎನಿಸುತ್ತದೆ.

–ಸುಘೋಷ ಸ. ನಿಗಳೆ, ಬೆಂಗಳೂರು



## ನಿರ್ಜೀವ ಪ್ಲಾಸ್ಟಿಕ್‌ಗೆ ಜೀವಸ್ಪರ್ಶ

ಕೊರೊನಾ ಸಮಯ ಮಹಿಳೆಯರಿಗೆ ಅದೊಂಥರಾ ಸವಾಲೇ ಸರಿ. ಬದುಕಿನಲ್ಲಿ ಗುರುತರ ಕಾರ್ಯಗಳನ್ನು ಮಾಡಬೇಕೆಂಬ ಹಂಬಲ ನಮ್ಮೆಲ್ಲರದ್ದು. ಹೀಗೆ ಏನಾದರು ಸಾಧಿಸಬೇಕೆಂದು ಹೊರಟ ನಮ್ಮ ಕಾಲುಗಳಿಗೆ ಸರಪಳಿ ಬಿಗಿದು ನಾಲ್ಕು ಗೋಡೆಗಳ ಮಧ್ಯೆ ಕೂರಿಸಿದ್ದು ಕೊರೊನಾ. ಜೀವ ಉಳಿಯಬೇಕು, ನಮ್ಮವರ ಆರೋಗ್ಯ ಕಾಪಾಡಬೇಕೆಂದರೆ ಮನೆಯೊಳಗೆ ಇರಲೇಬೇಕಾದದ್ದು ನಮ್ಮೆಲ್ಲರ ಆದ್ಯ ಕರ್ತವ್ಯವೂ ಹೌದು. ಹೀಗೆ ಮನೆಯೊಳಗೆ ಇರಲೇಬೇಕಾದ ಸಂದರ್ಭ ಬಂದಾಗ ಚಿಂತಿಸಿ ಮಾನಸಿಕವಾಗಿ ಕುಗ್ಗುವ ಬದಲು ನನ್ನ ಮನಸ್ಸನ್ನು ಇನ್ನೂ ಗಟ್ಟಿ ಮಾಡಿದ್ದು ನನ್ನಲ್ಲಿದ್ದ ಕೆಲವೊಂದು ಹವ್ಯಾಸಗಳು. ಅನುಪಯುಕ್ತ ಪ್ಲಾಸ್ಟಿಕ್ ಬಾಟಲ್‌ಗಳನ್ನು ಕಂಡಾಗಲೆಲ್ಲ ಅವುಗಳಿಗೆ ಜೀವಸ್ಪರ್ಶ ನೀಡಬೇಕೆಂಬ ತುಡಿತ ನನ್ನಲ್ಲಿತ್ತು. ಆ ತುಡಿತವನ್ನು ಕಾರ್ಯರೂಪಕ್ಕೆ ತಂದಾಗ ಕಂಡ ಪ್ರತಿಫಲವೇ ಈ ಚಿತ್ರದಲ್ಲಿ ಕಾಣುತ್ತಿರುವುದು.

–ಆಶಾ ಹೆಗಡೆ, ಬೆಂಗಳೂರು

